**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕ : 21.07.2026**

**ಪಾಟೀ ಸವಾಲುಃ 2 ನೇ ಎದುರುದಾರರ ಪರ ವಕೀಲರಿಂದಃ**

1. ನಿಪಿ.19 ನ್ನು ಈ ಮೊದಲು ಕೊಡಲು ನಿಮಗೆ ತೊಂದರೆ ಇತ್ತಾ ಎಂದರೆ ಸಾಕ್ಷಿ ಮಹದೇವಮ್ಮನವರದ್ದು ಬೆಂಗಳೂರಿನಲ್ಲಿತ್ತು ಅದನ್ನು ತಂದು ಕೊಡುವಲ್ಲಿ ವಿಳಂಬವಾಯಿತು ಎಂದು ಹೇಳುತ್ತಾರೆ. ನಿಮ್ಮ ಮನೆಯಲ್ಲಿ ಈಗ ಯಾರ್ಯಾರು ವಾಸ ಇರುತ್ತೀರಾ ಎಂದರೆ ಸಾಕ್ಷಿ ನಾನು, ನನ್ನ ಹೆಂಡತಿ ಮತ್ತು ಮಗಳು ವಾಸ ಇದ್ದೇವೆ. ನಿಮ್ಮ ಮಗಳಿಗೆ ಪ್ರಸ್ತುತ ಮದುವೆಯಾಗಿದೆ ಎಂದರೆ ಸರಿ. ನಿಮ್ಮ ಮಗಳು ಗಂಡನ ಮನೆಯಲ್ಲಿ ವಾಸ ಇದ್ದಾಳೆ ಎಂದರೆ ಸರಿ. ನೀವು ಮತ್ತು ನಿಮ್ಮ ಹೆಂಡತಿ ಇಬ್ಬರೆ ಮನೆಯಲ್ಲಿ ವಾಸ ಇರುತ್ತೀರಾ ಎಂದರೆ ಸರಿ. ನೀವು ನಿಮ್ಮ ಹೆಂಡತಿಯನ್ನು ದುಡಿದು ಸಾಕುತ್ತಿದ್ದೀರಾ ಎಂದರೆ ಸರಿ. ನಿಪಿ.19 ನ್ನು ದಿಃ 29.04.2026 ರಂದು ಮಾಡಿಸಿದೆ ಎಂದರೆ ಸರಿ. ನಿಪಿ.19 ನ್ನು ಸೃಷ್ಟಿಸಿಕೊಂಡು ಬಂದು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೀರಾ ಎಂದರೆ ಸರಿಯಲ್ಲ.

**1 ನೇ ಎದುರುದಾರು ಮತ್ತು ಅವರ ಪರ ವಕೀಲರನ್ನು ಹಲವಾರು ಬಾರಿ ಕರೆಸಲಾಯಿತು. ಗೈರು ಹಾಜರು, 1 ನೇ ಎದುರುದಾರ ಪರ ವಕೀಲರು ಈ ಸಾಕ್ಷೀದಾರರನ್ನು ಪಾಟೀ ಸವಾಲು ಮಾಡಲಿಲ್ಲ ಎಂದು ತೆಗೆದುಕೊಳ್ಳಲಾಯಿತು.**

**ಮರು ವಿಚಾರಣೆ ಇಲ್ಲ.**

**ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗೊಳಿಸಲಾಯಿತು.**

**ಓ ಹೇ ಕೇ ಸ ಇ ಒ**

**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ., ಪಾಂಡವಪುರ.**